**<u>ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ಶ್ರೀ. ಡಿ ಎಸ್ ವಕೀಲರಿಂದಃ-</u>**

1. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಪ್ರತಿವಾದಿ 2 ಶಿವರಾಮೇಗೌಡ, ಪ್ರತಿವಾದಿ 3 ಗೋಪಾಲಗೌಡ ತಮಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ತಮ್ಮಂದಿರು ಎನ್ನುತ್ತಾರೆ. 4 ನೇ ಪ್ರತಿವಾದಿ ದಾವಾ ಆಸ್ತಿಯ ಬಾಜುದಾರರು. ತಾವು 4 ನೇ ಪ್ರತಿವಾದಿಯ ಪರವಾಗಿಯು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. 4 ನೇ ಪ್ರತಿವಾದಿ ಖರೀದಿ ಮಾಡಿದ ಕ್ರಯಪತ್ರ ಮತ್ತು ಅವರ ಖರೀದಿದಾರರಿಂದ ಪಡೆದ ಕ್ರಯಪತ್ರದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ತಮ್ಮ ತಂದೆ ಮರೀಗೌಡ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 1995 ರಲ್ಲಿ ತೀರಿಕೊಂಡಿದ್ದಾರೆ ಎನ್ನುತ್ತಾರೆ.

2. ತಮ್ಮ ತಂದೆ ಖಾನೇಷುಮಾರಿ ನಂ.87 ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಜಾನಕಮ್ಮ ರವರಿಂದ ಎನ್ನುತ್ತಾರೆ. ಸದರಿ ಖರೀದಿ ಪತ್ರವನ್ನು ನೋಡಿ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಾವು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರ ತಮ್ಮ ಸಂಪೂರ್ಣ ಗಮನಕ್ಕೆ ಇದೆ ಎಂದರೆ ಸರಿ. ತಮ್ಮ ಖರೀದಿ ಮಾಡಿರುವ ಖಾನೇಷುಮಾರಿ ನಂ.87/1 ಮತ್ತು 87/2 ರ ಒಟ್ಟು ವಿಸ್ತೀರ್ಣದ ಚೆಕ್ಕುಬಂದಿಯನ್ನು ತಾವು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಹೇಳಲಾಗುತ್ತದೆ ಎಂದು ನುಡಿದು ಪೂರ್ವಕ್ಕೆ ನಮಗೆ ಸೇರಿದ ಹಿತ್ತಲು, ಪಶ್ಚಿಮಕ್ಕೆ ಚನ್ನಪಟ್ಟಣ-ಹಲಗೂರು ರಸ್ತೆ, ಉತ್ತರಕ್ಕೆ ಬಾಷಾ ಸಾಹೇಬರ ಮನೆ, ದಕ್ಷಿಣಕ್ಕೆ ನಮಗೆ ಸೇರಿದ ಆಸ್ತಿಗೆ ಓಡಾಡಲು ಬಿಟ್ಟು ಕೊಂಡಿರುವ ರಸ್ತೆ. ನನ್ನ ತಂದೆ ಪೂರ್ಣ ಆಸ್ತಿಯನ್ನು ಕಟ್ಟಡ ರೂಪದಲ್ಲೆ ಖರೀದಿ ಮಾಡಿದ ಆಸ್ತಿ ಎಂದರೆ ಸರಿ.

3. ನನ್ನ ತಂದೆ ಖರೀದಿ ಮಾಡಿದ ನಂತರ ನಮ್ಮ ಆಸ್ತಿಯಲ್ಲಿ ಅಂದರೆ ಖಾನೇಷುಮಾರಿ ನಂ.87/1 ಮತ್ತು 87/2ರ ವಿಸ್ತೀರ್ಣದ ಆಸ್ತಿಯಲ್ಲಿ ನಾವು ಯಾವುದೇ ಮರು ಕಟ್ಟಡ ಕಟ್ಟಿಲ್ಲ ಎಂದರೆ ಸರಿ. ತಾವು ಈ ಮೇಲೆ ತಮ್ಮ ತಂದೆ ಖರೀದಿ ಮಾಡಿದ ಆಸ್ತಿ ಸಂಪೂರ್ಣ ಕಟ್ಟಡದ ಸ್ಥಿತಿಯಲ್ಲಿ ಇದ್ದ ಆಸ್ತಿ ಎಂದು ತಾವು ಹೇಳಿದ್ದು ತಮ್ಮ ಪ್ರತಿವಾದ ಪತ್ರದಲ್ಲಿ ಪೂರ್ವ-ಪಶ್ಚಿಮ 62 ಅಡಿ, ಉತ್ತರ-ದಕ್ಷಿಣ 27.1/2 (ಇಪ್ಪತ್ತೇಳುವರೆ) ಅಡಿ ಜಾಗದಲ್ಲಿ ಕಟ್ಟಡ ಕಟ್ಟಿ ಇನ್ನುಳಿಕೆ ಜಾಗವನ್ನು ಖಾಲಿ ಬಿಟ್ಟು ಕೊಂಡಿದ್ದೇವೆ ಎಂದು ಹೇಳಿದ್ದೇವೆ ಎಂದರೆ ಸರಿ. ತಮ್ಮ ತಂದೆ ಖರೀದಿ ಮಾಡಿದ ನಿಡಿ-2ರ ಕ್ರಯಪತ್ರದಲ್ಲಿ ಇಷ್ಟು ಅಡಿ ವಿಸ್ತೀರ್ಣಕ್ಕೆ ಕಟ್ಟಡ ಇದ್ದು, ಇಷ್ಟು ಅಡಿ ವಿಸ್ತೀರ್ಣ ಖಾಲಿ ಜಾಗ ಬಿಟ್ಟಿದೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

4. ತಮ್ಮ ಪ್ರತಿವಾದ ಪತ್ರದಲ್ಲಿ ಖಾನೇಷುಮಾರಿ ನಂ.87/1ರಲ್ಲಿ ಉಳಿಸಿಕೊಂಡಿರುವ ಖಾಲಿ ಜಾಗವನ್ನು ಖಾನೇಷುಮಾರಿ ನಂ.87/2 ಎಂದು ನಮೂದಿಸಿಕೊಂಡಿದ್ದೇವೆ ಎಂದು ಹೇಳಿದ್ದೇನೆ ಎಂದರೆ ಸರಿ. ನಿಡಿ-2 ಕ್ರಯಪತ್ರದಲ್ಲಿ 87/2ರ ಆಸ್ತಿ 87/1ರ ಆಸ್ತಿಗೆ ಓಡಾಡಲು ಬಿಟ್ಟಿರುವ ದಾರಿ ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನಾನು ಈ ಮೇಲೆ ಹೇಳಿರುವ ಅಂಶಗಳಿಗೂ ಮತ್ತು ನಿಡಿ-2 ಕ್ರಯಪತ್ರದಲ್ಲಿರುವ ಅಂಶಗಳಿಗೂ ಒಂದಕ್ಕೊಂದು ಹೊಲಿಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯು ನಿಡಿ-3 ಕ್ರಯಪತ್ರದಲ್ಲಿ ಎಷ್ಟು ಐಟಂ ಸ್ವತ್ತು ಗಳನ್ನು ಖರೀದಿ ಮಾಡಿರುತ್ತಾರೆ ಎಂದು ತಾವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ.

5. ಖಾನೇಷುಮಾರಿ ನಂ.86/ಬಿ ಆಸ್ತಿಯ ವಿಸ್ತೀರ್ಣ ಎಷ್ಟು ಎಂದರೆ ಪೂರ್ವ-ಪಶ್ಚಿಮ 6 ಅಡಿ, ದಕ್ಷಿಣೋತ್ತರ 8 ಅಡಿ ಎನ್ನುತ್ತಾರೆ. ಖಾನೇಷುಮಾರಿ ನಂ.86/ಬಿ ಆಸ್ತಿಯ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು ಪೂರ್ವ-ಪಶ್ಚಿಮ 13 ಅಡಿ, ದಕ್ಷಿಣೋತ್ತರ 12 ಅಡಿ ಎನ್ನುತ್ತಾರೆ. ಖಾನೇಷುಮಾರಿ ನಂ.86/ಬಿ ಇದರ ಮೂಲ ಒಟ್ಟು ವಿಸ್ತೀರ್ಣ ಪೂರ್ವ-

ಪಶ್ಚಿಮ 12 ಅಡಿ, ದಕ್ಷಿಣೋತ್ತರ 13.05 ಅಡಿ ಇತ್ತು ಎಂದರೆ ಸರಿ. ಸದರಿ ವಿಸ್ತೀರ್ಣ ದಲ್ಲಿ 4 ನೇ ಪ್ರತಿವಾದಿಯು ಪೂರ್ವ-ಪಶ್ಚಿಮ 8 ಅಡಿ, ದಕ್ಷಿಣೋತ್ತರ 6 ಅಡಿ ಖರೀದಿ ಮಾಡಿದಾದ್ದರೆ ಎಂದರೆ ಸರಿ. ಖಾನೇಷುಮಾರಿ ನಂ.86/ಬಿ ವಿಸ್ತೀರ್ಣ ಪೂರ್ವ-ಪಶ್ಚಿಮ 8 ಅಡಿ, ದಕ್ಷಿಣೋತ್ತರ 6 ಅಡಿ ಜಾಗಕ್ಕೆ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿ ಪೂರ್ವಕ್ಕೆ 1 ನೇ ವಾದಿಯ ಗಂಡ ಪುಟ್ಟಸಿದ್ದಯ್ಯರವರ ಮನೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಸಾವಿತ್ರಮ್ಮರವರಿಗೆ ಸೇರಿದ ಮನೆ ಇದೆ ಎನ್ನುತ್ತಾರೆ.

6. ಪೂರ್ವಕ್ಕೆ ಪುಟ್ಟಸಿದ್ದಯ್ಯರವರ ಮನೆ, ಪಶ್ಚಿಮಕ್ಕೆ ಸಾವಿತ್ರಮ್ಮರವರ ಮನೆ, ಉತ್ತರಕ್ಕೆ ಪುಟ್ಟಸಿದ್ದಯ್ಯರವರ ಮನೆ, ದಕ್ಷಿಣಕ್ಕೆ ಸಾವಿತ್ರಮ್ಮರವರಿಗೆ ಸೇರಿದ ಮನೆ ಎಂದರೆ ಸರಿ. 4 ನೇ ಪ್ರತಿವಾದಿ ಖಾನೇಷುಮಾರಿ ನಂ.86/ಬಿ ಆಸ್ತಿಯನ್ನು ಖರೀದಿ ಮಾಡಿದ ಚೆಕ್ಕುಬಂದಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯ ಗಂಡ ಪುಟ್ಟಸಿದ್ದಯ್ಯ ಖರೀದಿ ಮಾಡಿದ ದಾವಾ ಆಸ್ತಿಯ ಕ್ರಯಪತ್ರವನ್ನು ತಾವು ನೋಡಿದ್ದೀರಾ ಎಂದರೆ ನೋಡಿದ್ದೇನೆ ಎನ್ನುತ್ತಾರೆ. ನನ್ನ ತಂದೆ ಖಾನೇಷುಮಾರಿ ನಂ.87/1 ಮತ್ತು 87/2 ಆಸ್ತಿಗಳನ್ನು ಖರೀದಿ ಮಾಡುವ ಮೊದಲೇ ದಾವಾ ಆಸ್ತಿಯನ್ನು 1 ನೇ ವಾದಿಯ ಗಂಡ ಪುಟ್ಟಸಿದ್ದಯ್ಯ ಖರೀದಿ ಮಾಡಿದ್ದರು ಎಂದರೆ ಸರಿ. ವಾದಿಯ ಗಂಡ ಖರೀದಿ ಮಾಡಿದ ಆಸ್ತಿಯ ಚೆಕ್ಕುಬಂದಿಯನ್ನು ತಾವು ನೋಡಿ ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-4 ಕ್ರಯಪತ್ರದಲ್ಲಿ ಇರುವ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಚೆಕ್ಕುಬಂದಿಯನ್ನು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ನಿಪಿ-4 ಕ್ರಯಪತ್ರದಲ್ಲಿ ಷೆಡ್ಯೂಲ್ ನಲ್ಲಿ ಈ ರೀತಿ ಇದೆ ಎಂದರೆ ನಿಮ್ಮ ಮನೆಗೆ ಅಂದರೆ ಪುಟ್ಟಸಿದ್ದಯ್ಯರವರ ಮನೆಗೆ ಬರುವುದಕ್ಕೆ ಪಶ್ಚಿಮದ ಕಡೆ ಕೆ ಎಂ ಖಾದರ್ ಮತ್ತು ಅನ್ವರ್ ಪಾಷ ರವರುಗಳ ಮನೆಯ ಮಧ್ಯ ಭಾಗದಲ್ಲಿ 8 ಅಡಿ ಜಾಗ ಇರುತ್ತದೆ ಮತ್ತು ಅದರಲ್ಲಿರುವ 3 ತೆಂಗಿನ ಮರಗಳು ಸಹ ಸೇರಿರುತ್ತದೆ ಎಂದು ಕ್ರಯ ಪತ್ರದಲ್ಲಿ ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ.

7. ನಿಪಿ-18 ಫೋಟೋವನ್ನು ತೋರಿಸಿ ಸಾಕ್ಷಿಗೆ ಕೇಳಲಾಗಿ ಪಶ್ಚಿಮದ ಕಡೆ 8 ಅಡಿ ಜಾಗ ಇರುವುದು ಇದೇನಾ ಎಂದು ಕೇಳಲಾಗಿ ಸಾಕ್ಷಿಯು ಇದೆ ಎನ್ನುತ್ತಾರೆ. ನಿಪಿ-19 ಫೋಟೋದಲ್ಲಿ ಕಾಣುವ ಬಜಾಜ್ ಚೇತಕ್ ಮೋಟಾರ್ ಸೈಕಲ್ ಅಡ್ಡ ನಿಲ್ಲಿಸಿರುವ ಮೋಟಾರ್ ಸೈಕಲ್ ನನ್ನದು ಎಂದರೆ ಸರಿ. ನಿಪಿ-19ರ ಫೋಟೋದ ಕೊನೆಯಲ್ಲಿ ಕಾಣುತ್ತಿರುವ ಮನೆ 1 ನೇ ವಾದಿ ಪುಟ್ಟಸಿದ್ದಯ್ಯನಿಗೆ ಸೇರಿದ್ದು ಎಂದರೆ ಸರಿ. ವಾದಿಯ ಪರ ಇದೇ ನ್ಯಾಯಾಲಯದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಇದ್ದರೂ ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ನಾನು ಉದ್ದೇಶ ಪೂರ್ವಕವಾಗಿ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಇದ್ದರೂ ದಾವಾ ಆಸ್ತಿಗೆ ವಾದಿ ಓಡಾಡಲು ಇವತ್ತಿಗೂ ನಾನು ಬಿಡುತ್ತಿಲ್ಲ ಎಂದರೆ ಸರಿಯಲ್ಲ. ನಿಮ್ಮ ಆಸ್ತಿಯ ಯಾವ ದಿಕ್ಕಿನ ಕಡೆ ಮಲ್ಲೇಶಯ್ಯನ ಮನೆ ಇದೆ ಎಂದರೆ ಸಾಕ್ಷಿಯು ದಕ್ಷಿಣದ ಕಡೆ ಎನ್ನುತ್ತಾರೆ. ನಮ್ಮ ಮನೆಯ ಪೂರ್ವಕ್ಕೆ ಪುಟ್ಟಸಿದ್ದಯ್ಯರ ಮನೆ, ಪುಟ್ಟಸಿದ್ದಯ್ಯರವರ ಮನೆ ಆದ ನಂತರ ಮಲ್ಲೇಶಯ್ಯನ ಮನೆ ಇದೆ ಎಂದರೆ ಸರಿಯಲ್ಲ.

8. ನಮ್ಮ ಮನೆಗೆ ಮತ್ತು 4 ನೇ ಪ್ರತಿವಾದಿಗಳ ಮನೆಗೆ ತಿರುಗಾಡಲು ಚನ್ನಪಟ್ಟಣ ಮತ್ತು ಹಲಗೂರು ರಸ್ತೆ ಇದೆ ಎಂದರೆ ಸರಿ. ವಾದಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ತಮ್ಮ ಮನೆಗೆ ಓಡಾಡಲು ಬೇರೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ವಾದಿಯು 1988 ನೇ ಇಸವಿಯಿಂದ 2019 ರವರೆಗೆ ದಾವಾ ಸ್ವತ್ತನ್ನೆ ತಿರುಗಾಡಲು ಬಳಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಯ ಮನೆಗೆ ತಿರುಗಾಡಲು ಇರುವ ಏಕಮಾತ್ರ ಜಾಗ ಎಂದು ಗೊತ್ತಿದ್ದರೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ